**ಒ.ಎಸ್.ನಂಬ್ರ: 214/2021 ಪಿ .ಡಬ್ಲ್ಯೂ : 1**

ದಿನಾಂಕ: 06-06-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: ಪ್ರತಿವಾದಿ ಪರ ಶ್ರೀ. ಕೆ.ಸಿ.ಎಸ್ ವಕೀಲರಿಂದ**

1. ನಿಶಾನೆಪಿ 10 ವಿಭಾಗಪತ್ರದಲ್ಲಿ ತೋರಿಸಿರುವ ಸೀತಮ್ಮ ಶೆಡ್ತಿ ಎಂದರೆ ನನ್ನ ಹೆಂಡತಿಯ ತಾಯಿ ಎಂದರೆ ಸರಿ . ಅದೇ ರೀತಿ ಮೂಕಾಂಬಿಕ ಶೆಡ್ತಿ , ಕುಶಾಲ ಶೆಟ್ಟಿ , ರಾಜೀವಿ ಶೆಟ್ಟಿ , ವಿಶಾಲಾಕ್ಷಿ ಶೆಟ್ಟಿ, ಸರೋಜಿನಿ ಶೆಟ್ಟಿ ರವರು ಸೀತಮ್ಮ ಶೆಡ್ತಿ ರವರ ಮಕ್ಕಳು ಎಂದರೆ ಸರಿ . ಅದೇ ರೀತಿ ಸುರೇಂದ್ರ, ಸುಚಿತ್ರ ಮತ್ತು ಸುಜಾತ ರವರುಗಳು ಮೂಕಾಂಬಿಕ ಶೆಡ್ತಿರವರ ಮಕ್ಕಳು ಎಂದರೆ ಸರಿ . ಪ್ರದೀಪ, ಪ್ರವೀಣ, ಪಾವನಿರವರು ವಿಶಾಲಾಕ್ಷಿ ಶೆಟ್ಟಿ ರವರ ಮಕ್ಕಳು ಎಂದರೆ ಸರಿ . ರಾಜೀವಿ ಶೆಟ್ಟಿ ಎಂದರೆ ನನ್ನ ಹೆಂಡತಿ , ದಿವ್ಯ ಹಾಗೂ ದೀರಜ್ ರವರು ನನ್ನ ಮಕ್ಕಳು ಎಂದರೆ ಸರಿ. ವಿಭಾಗವಾಗುವ ಸಮಯದಲ್ಲಿ ಪ್ರತಿವಾದಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ . ಈ ಮೇಲೆ ಹೇಳಿದ ಅಳಿಯ ಸಂತಾನದ ಕಟ್ಟು ಆಚರಿಸುವ ವಿಭಕ್ತ ಕುಟುಂಬದ ಸದಸ್ಯರಾಗಿರುತ್ತಾರೆ ಎಂದರೆ ಸರಿ.
2. ವಿಭಾಗ ಪತ್ರದ ಪ್ರಕಾರ ಅನುಸೂಚಿ ಎ ಸ್ವತ್ತುಗಳು ಮೂಕಾಂಬಿಕ ಶೆಡ್ತಿ ಹಾಗೂ ಅವರ ಮಕ್ಕಳ ಪಾಲಿಗೆ ಹೋಗಿರುತ್ತದೆ ಎಂದರೆ ಸರಿ . ಅನುಸೂಚಿ ಬಿ ಸ್ವತ್ತುಗಳು ವಿಶಾಲಾಕ್ಷಿ ಶೆಟ್ಟಿ ಹಾಗೂ ಅವರ ಮಕ್ಕಳಿಗೆ ಹೋಗುತ್ತದೆ ಎಂದರೆ ಸರಿ. ಅನುಸೂಚಿ ಸಿ ನ ಸ್ವತ್ತುಗಳು ನನ್ನ ಹೆಂಡತಿ ಮತ್ತು ಮಕ್ಕಳಿಗೆ ಹೋಗುತ್ತದೆ ಎಂದರೆ ಸರಿ . ಅನುಸೂಚಿ ಡಿ ಸ್ವತ್ತುಗಳು ಸರೋಜಿನಿ ರವರಿಗೆ ವಿಂಗಡಿಸಿದ ಆಸ್ತಿಗಳು ಎಂದರೆ ಸರಿ . ಅಳಿಯ ಸಂತಾನದ ಕಟ್ಟಿನ ಪ್ರಕಾರ ಹಿರಿಯರಿಂದ ಬಂದಂತಹ ಸ್ವತ್ತುಗಳು ಹೆಣ್ಣು ಮಕ್ಕಳು ಹಾಗೂ ಹೆಣ್ಣು ಮಕ್ಕಳ ಮಕ್ಕಳಿಗೆ ಹೋಗುತ್ತದೆ ಎಂದರೆ ಸರಿ. ಪ್ರತಿವಾದಿಗೆ 3 ಜನ ಮಕ್ಕಳು ಎಂದರೆ ಸ ರಿ . ಅವರುಗಳ ಹೆಸರು ಕೃಷ್ಣ ಕಿಶೋರ್ , ಕಿರಣ್ ರಾಜ್ ಮತ್ತು ಕೋಮಲ. ಸದರಿ 3 ಜನರಿಗೆ ಪಾಲದ ನಂತರ ಜನಿಸಿರುತ್ತಾರೆ ಎಂದರೆ ಸರಿ. ಪಾಲು ಪಟ್ಟಿ ಪ್ರಕಾರ ಅವರ ಮಕ್ಕಳಿಗೂ ಸಹ ಹಕ್ಕು ಬರುತ್ತದೆ ಎಂದರೆ ಸರಿ .
3. ಪ್ರತಿವಾದಿಯವರ ಗಂಡ ವಿಜಯ ಬ್ಯಾಂಕ್ ನಲ್ಲಿ ಉದ್ಯೋಗಿಯಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಯವರು ಅವರ ಗಂಡ ನ ಜೊತೆಗೆ ಹೊರಗೆಯೇ ವಾಸ ಇದ್ದರು ಎಂದರೆ ಸರಿ. ಪ್ರತಿವಾದಿಯವರ ಗಂಡ ಬೇರೆ ಬೇರೆ ಕಡೆ ವರ್ಗಾವಣೆ ಗೊಂಡು ಕೆಲಸ ಮಾಡಿರುತ್ತಾರೆ . 2007 ರಿಂದ 2009 ರವರೆಗೆ ಪ್ರತಿವಾದಿಯ ಗಂಡ ನಾಗಲ್ಯಾಂಡ್ ನ ವಿಜಯ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಊರಿಗೂ ಬಂದು ಹೋಗುತ್ತಿದ್ದರು ಎಂದು

ನುಡಿಯುತ್ತಾರೆ . ಪ್ರತಿವಾದಿಯೂ ಸಹ ಅವರ ಗಂಡನ ಜೊತೆ ನಾಗಲ್ಯಾಂಡ್ ನಲ್ಲಿ ಇದ್ದರು ಎಂದರೆ ಸರಿ . ಸರ್ವೇ ನಂ 123/4 ರಲ್ಲಿ 2 .5 ಎಕ್ರೆ ಜಮೀನು ಇರುತ್ತದೆ . ಆ ಆಸ್ತಿಯಲ್ಲಿ ಮೂಕಾಂಬಿಕ ಶೆಡ್ತಿ, ಸರೋಜಿನಿ ಶೆಡ್ತಿ , ವಿಶಾಲಾಕ್ಷಿ ಶೆಟ್ಟಿ ಮತ್ತು ರಾಜೀವಿರವರಿಗೆ ಪಾಲು ಆಗಿರುತ್ತದೆ ಎಂದರೆ ಸರಿ . ಸರ್ವೇ ನಂ 126/1 ರಲ್ಲಿ 67 ಸೆಂಟ್ಸ್ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಎಲ್ಲರಿಗೂ ಪಾಲು ಆಗಿರುತ್ತದೆ . ನಿಶಾನೆ ಪಿ 9 ರ ಕರಾರು ಮುನ್ಸಿಪಾಲಿಟಿ ಕಚೇರಿಯಲ್ಲಿ ತಯಾರು ಮಾಡಲಾಯಿತು. ನಿಶಾನೆ ಪಿ 9 ರಲ್ಲಿರವ 2 ಆಸ್ತಿಗಳ ಗಡಿ ಗುರುತುಗಳನ್ನು ಕಾಣಿಸಿರುವುದಿಲ್ಲ ಎಂದರೆ ಸರಿ . ಸರ್ವೇ ನಂ 123/4 ರಲ್ಲಿ ಗಡಿ ಗುರುತನ್ನು ತೋರಿಸಿರುವುದಿಲ್ಲ . ಐಟಂ ನಂ 3 126/1 ರ ಗಡಿ ಗುರುತನ್ನು ತೋರಿಸಿರುವುದಿಲ್ಲ. ನಿಶಾನೆ ಪಿ9 ರ 2 ನೇ ಪುಟದಲ್ಲಿ ಹೇಳಲಾಗಿರುವ ಮೊದಲು 3 ಲೈನ್ ನಲ್ಲಿ ಹೇಳಿರುವ ಕ್ರಯಪತ್ರದ ಬಗ್ಗೆ ದಿನಾಂಕವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಕ್ರಯಪತ್ರ ಆಗ ಇರಲಿಲ್ಲ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.**

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**